**ಅ. ದಾ. ಸಂ. 171/2019**
**ಪಿ. ಡಬ್ಲ್ಯೂ - 01**

**ದಿನಾಂಕ: 25-11-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು:- 2 ರಿಂದ 7 ಮತ್ತು 9 ರಿಂದ 13ನೇ ಪ್ರತಿವಾದಿಗಳ ಪರ ಶ್ರೀ. ಬಿ. ಟಿ. ಐ, ವಕೀಲರಿಂದ:-**

06. ನಿಪಿ-87ರಂತೆ ಮಾಡಿರುವ ಭೋಗ್ಯ ಪತ್ರವನ್ನು ನಿಮ್ಮ ತಂದೆಯವರು ಸಿದ್ದಪ್ಪನವರಿಂದ ಬಿಡುಗಡೆ ಮಾಡಿಸಿಕೊಂಡಿದ್ದಾರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ವಾದಪತ್ರ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರಕ್ಕೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ವಾದಪತ್ರ ಮತ್ತು ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ನಿಪಿ-87 ರಂತೆ ಮಾಡಿರುವ ಭೋಗ್ಯ ಪತ್ರವನ್ನು ನಿಮ್ಮ ತಂದೆಯವರು ಸಿದ್ದಪ್ಪನವರಿಂದ ಬಿಡುಗಡೆ ಮಾಡಿಸಿಕೊಂಡು ಸ್ವಾಧೀನವನ್ನು ಮರಳಿ ಪಡೆದುಕೊಂಡಿರುತ್ತಾರೆ ಎಂದು ಹೇಳಿರುತ್ತೀರಾ ಮತ್ತು ಸದರಿ ವಿಷಯಕ್ಕೆ ಯಾರು ಮಾಹಿತಿಯನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ತಾನು ಅದಕ್ಕೆ ಮಾಹಿತಿಯನ್ನು ನೀಡಿದ್ದೇನೆ ಎನ್ನುತ್ತಾರೆ. ಸದರಿ ವಿಷಯದ ಬಗ್ಗೆ ನನಗೆ ದಾಖಲೆಯ ಮುಖಾಂತರ ಗೊತ್ತಾಗಿರುತ್ತದೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಭೋಗ್ಯ ಬಿಡಿಸಿಕೊಂಡಿರುವ ದಾಖಲೆಯನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನನ್ನ ತಾಯಿ ಮೃತಪಟ್ಟ ಒಂದು ತಿಂಗಳಿಗೆ ಮನೆಯನ್ನು ಸ್ವಚ್ಛ ಗೊಳಿಸುವ ಸಮಯದಲ್ಲಿ ನನಗೆ ಈ ಮೇಲೆ ಹೇಳಿರುವ ದಾಖಲೆಗಳ ಬಗ್ಗೆ ಗೊತ್ತಾಯಿತು. ಸದರಿ ವಿಷಯದ ಬಗ್ಗೆ ನನ್ನ ತಾಯಿಯವರು ನನಗೆ ಹೇಳಿರುವುದಿಲ್ಲ, ಆಗಾಗಿ ನನಗೆ ಅದರ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

07. ನನ್ನ ತಂದೆಯವರು 1980 ನೇ ಇಸವಿಯಲ್ಲಿ ಮೃತ ಪಟ್ಟಿರುತ್ತಾರೆ ಮತುತ ಅವರ ಮರಣದ ನಂತರ ನನ್ನ ತಾಯಿಯೇ ನಮ್ಮ ಕುಟುಂಬದ

ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು. ನನ್ನ ತಂದೆಯು ಮೃತಪಟ್ಟ ಸಮಯದಲ್ಲಿ ನನ್ನ ತಮ್ಮನಾದ 3ನೇ ವಾದಿಯ ಯಜಮಾನರು 8ನೇ ತರಗತಿಯನ್ನು ಓದುತ್ತಿದ್ದರು. ಈ ಮೇಲೆ ಹೇಳಿರುವ ವಿಷಯದ ಬಗ್ಗೆ ನನ್ನ ತಾಯಿಗೆ ಸಹ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ತಂದೆಯವರು ಬದುಕಿದ್ದ ಸಮಯದಲ್ಲಿ ಸದರಿ ದಾಖಲೆಗಳ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೂಂಡಿರುವುದಿಲ್ಲ.

08. ಪ್ರಸ್ತುತವಾಗಿ ದಾವಾಸ್ವತ್ತುಗಳು ನನ್ನ ಸ್ವಾಧೀನದಲ್ಲಿಯೇ ಇದೆ. ನಾನು ಚಿಕ್ಕವಳು ಇದ್ದಾಗ ನನ್ನ ತಂದೆಯವರು ಬೊಮ್ಮೇಗೌಡರಿಂದ ದಾವಾಸ್ವತ್ತುಗಳ ಸ್ವಾಧೀನವನ್ನು ಪಡೆದುಕೊಂಡಿರುತ್ತಾರೆ, ಆದರೆ ಯಾವ ದಿನಾಂಕದಂದು ಸದರಿ ಸ್ವಾಧೀನವನ್ನು ಪಡೆದುಕೊಂಡಿದ್ದಾರೆ ಎಂದು ನನಗೆ ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ. ನನ್ನ ತಂದೆಯವರು ಬೊಮ್ಮೆಗೌಡರಿಗೆ ಸದರಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದೇ ಹಣವನ್ನು ನೀಡಿರುವುದಿಲ್ಲ. ನಿಪಿ-89ಗೆ ನಾನೇ ನನ್ನ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ನಾನು ನಿಪಿ-89ಗೆ ಮಾಹಿತಿಯನ್ನು ಕೊಡುವ ಸಮಯದಲ್ಲಿ ಯಾವ ದಿನಾಂಕದಂದು ನನ್ನ ತಂದೆಯವರು ಬೊಮ್ಮೆಗೌಡರಿಗೆ ಹಣವನ್ನು ನೀಡಿದ್ದಾರೆ ಮತ್ತು ಸ್ವಾಧೀನವನ್ನು ಪಡೆದುಕೊಂಡಿದ್ದಾರೆ ಎಂದು ಹೇಳಿರುವುದಿಲ್ಲ. ನಿಪಿ-89ರ 4ನೇ ಪ್ಯಾರಾದಲ್ಲಿ ನೀವು ದಿ.03-07-1974 ರಿಂದ ಸ್ವಾಧೀನದಲ್ಲಿ ಇದ್ದೀರಾ ಎಂದು ಹೇಳಿರುತ್ತೀರಾ ಮತ್ತು ಸದರಿ ದಿನಾಂಕದ ಬಗ್ಗೆ ನಿಮಗೆ ಯಾರು ಮಾಹಿತಿಯನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ತಾನೇ ಅದಕ್ಕೆ ಮಾಹಿತಿಯನ್ನು ನೀಡಿದ್ದೇನೆ ಎನ್ನುತ್ತಾರೆ. ದಿ.03-07-1974ರ ತಾರೀಖಿಗೆ ಸಂಬಂಧಿಸಿದಂತೆ ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. ನೀವು ನಿಪಿ-89ಗೆ ನೀಡಿರುವ ಮಾಹಿತಿಯನ್ನು ಸೃಷ್ಟಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

09. ನಿಪಿ-88ನ್ನು ನಾನು ನೋಡಿರುವುದಿಲ್ಲ. ದಾವಾಸ್ವತ್ತುಗಳಿಗೆ ಸಂಬಂಧಿಸಿದಂತೆ ಇರುವ ವಿಸ್ತೀರ್ಣದ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿಯು ತಾನು ದಾವಾಸ್ವತ್ತುಗಳ ಬಳಿ ಹೋದರೆ ಅದರ ಬಗ್ಗೆ ಹೇಳುತ್ತೇನೆ ಎನ್ನುತ್ತಾರೆ. ನಿಪಿ-89 ರಂತೆ ನೋಟಿಸ್ ನ್ನು ಕಳುಹಿಸುವ ಸಮಯದಲ್ಲಿ ಅಥವಾ ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ನೀವು ನಿಪಿ-88ನ್ನು ನಿಮ್ಮ ವಕೀಲರಿಗೆ ನೀಡಿರುತ್ತೀರಾ ಎಂದರೆ ಸಾಕ್ಷಿಯ ಇಲ್ಲ ಎನ್ನುತ್ತಾರೆ. ನಿಪಿ-88ರಂತೆ ನಿಮ್ಮ ತಂದೆಯು ಬೊಮ್ಮೆಗೌಡರ ಹೆಸರಿಗೆ ದಾವಾಸ್ವತ್ತುಗಳನ್ನು ಮಾಡಿಕೊಟ್ಟ ದಿನದಿಂದ ನೀವು ಅಥವಾ ನಿಮ್ಮ ಕುಟುಬದವರ ಹೆಸರಿನಲ್ಲಿ ದಾವಾಸ್ವತ್ತುಗಳಿಗೆ ಸಂಬಂಧಿಸಿದಂತೆ ರೆವಿನ್ಯೂ ದಾಖಲೆಗಳು ಬರುತ್ತಿದೆಯಾ ಎಂದರೆ ಸಾಕ್ಷಿಯು ತನ್ನ ತಂದೆಯ ಹೆಸರಿನಲ್ಲಿ ರೆವಿನ್ಯೂ ದಾಖಲೆಗಳು ಬರುತ್ತಿದೆ ಎನ್ನುತಾರೆ. ಈಗ ಸಾಕ್ಷಿಗೆ ತಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳನ್ನು ತೋರಿಸಿದ್ದು, ಅದರಂತೆ ನಿಮ್ಮ ಅಥವಾ ನಿಮ್ಮ ಕುಟುಂಬದವರ ಹೆಸರಿನಲ್ಲಿ ದಾವಾಸ್ವತ್ತುಗಳಿಗೆ ಸಂಬಂಧಿಸಿದಂತೆ ಇರುವ ಕಂದಾಯ ದಾಖಲೆಗಳು ಯಾವುದು ಎಂದರೆ ಸಾಕ್ಷಿಯು ತನಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಎನ್ನುತ್ತಾರೆ. ನಿಮ್ಮ ಮತ್ತು ನಿಮ್ಮ ಕುಟುಬದವರ ಹೆಸರಿನಲ್ಲಿ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಕಂದಾಯ ದಾಖಲೆಗಳು ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಮ್ಮ ಕುಟುಂಬದವರ ಹೆಸರಿನಲ್ಲಿ ದಾವಾಸ್ವತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ಕಂದಾಯ ದಾಖಲೆಗಳು ಬಂದಿರುವುದಿಲ್ಲ ಮತ್ತು ಮೊದಲಿನಿಂದಲೂ ಬೊಮ್ಮೆಗೌಡರ ಕುಟುಂಬದವರ ಹೆಸರಿನಲ್ಲಿಯೇ ದಾವಾಸ್ವತ್ತುಗಳಿಗೆ ಸಂಬಂಧಿಸಿದಂತೆ ಕಂದಾಯ ದಾಖಲೆಗಳು ಬರುತ್ತಿತ್ತು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ

ದಾವಾಸ್ವತ್ತುಗಳಿಗೆ ಸಂಬಂಧಿಸಿದಂತೆ ಪಹಣಿಯು ಸಿದ್ದಪ್ಪನವರ ಹೆಸರಿನಲ್ಲಿ ಬರುತ್ತಿತ್ತು.

**ಈ ಹಂತದಲ್ಲಿ ಮುಂದುವರೆದ** ಪಾಟೀ **ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**

**ದಿನಾಂಕ: 24-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- 3ನೇ ಪ್ರತಿವಾದಿಯ ಪರ ಶ್ರೀ. ಎಂ.ಎಸ್.ಎಸ್. ವಕೀಲರಿಂದ:-**

5. ಮೃತ 1ನೇ ಪ್ರತಿವಾದಿ ನಿಮ್ಮ ಅಣ್ಣ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಮೃತ 1ನೇ ಪ್ರತಿವಾದಿ ಬದುಕಿದ್ದ ಸಮಯದಲ್ಲಿ ಅವರು ಸಾಕಷ್ಟು ಆಸ್ತಿಗಳನ್ನು ಹೊಂದಿದ್ದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. 1ನೇ ಪ್ರತಿವಾದಿಗೆ ಮಗ್ಗದ ಕೆಲಸದಿಂದ ಸಾಕಷ್ಟು ಆದಾಯವಿತ್ತು ಎಂದರೆ ಸಾಕ್ಷಿ ಅವರು ಸದರಿ ಕೆಲಸವನ್ನು ಬಿಟ್ಟು ಸುಮಾರು 35-40 ವರ್ಷಗಳು ಆಗಿತ್ತು ಎನ್ನುತ್ತಾರೆ. 1ನೇ ಪ್ರತಿವಾದಿಗೆ ಮಗ್ಗದ ಕೆಲಸದಿಂದ ಆದಾಯ ಇದ್ದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

6. 1ನೇ ಪ್ರತಿವಾದಿಗೆ ದಾವ ಸ್ವತ್ತನ್ನು ಮಾರಾಟ ಮಾಡುವ ಯಾವುದೇ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ದಾವ ಸ್ವತ್ತನ್ನು ಮಾರಾಟ ಮಾಡಿದ ಆದಾಯದಿಂದ 1ನೇ ಪ್ರತಿವಾದಿಯು ಯಾವುದೇ ಸ್ವತ್ತನ್ನು ಖರೀದಿ ಮಾಡಿರುವುದಿಲ್ಲ ಹಾಗೂ ಮನೆಯನ್ನು ಸಹ ನಿರ್ಮಾಣ ಮಾಡಿರುವುದಿಲ್ಲ ಎಂದರೆ ಸಾಕ್ಷಿ 1ನೇ ಪ್ರತಿವಾದಿಯು ಹೊಸದಾಗಿ ಮನೆಯನ್ನು ನಿರ್ಮಾಣ ಮಾಡಿದ್ದಾರೆ ಎನ್ನುತ್ತಾರೆ. 1ನೇ ಪ್ರತಿವಾದಿಯು ಮನೆಯನ್ನು ನಿರ್ಮಾಣ ಮಾಡಿ ಸುಮಾರು 25-30 ವರ್ಷಗಳು ಆಗಿದೆ ಎಂದರೆ ಸಾಕ್ಷಿ ಅವರು 2014-15ನೇ ಸಾಲಿನಲ್ಲಿ ಮನೆಯನ್ನು ನಿರ್ಮಾಣ ಮಾಡಿದರು ಎನ್ನುತ್ತಾರೆ. ನಿಪಿ-1 ನೀವು ಈ ದಾವೆಗಾಗಿ ಸೃಷ್ಟಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ನಿಪಿ-1 ಕ್ಕೆ 3 ರಿಂದ 7ನೇ ಪ್ರತಿವಾದಿಗಳು ಸಹಿಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ನಿಪಿ-1 ರಲ್ಲಿ ನೀವು 3 ರಿಂದ 7ನೇ ಪ್ರತಿವಾದಿಗಳ ಸಹಿಯನ್ನು ಸೃಷ್ಟಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ನಿಪಿ-1 ರಲ್ಲಿ 3 ರಿಂದ 7ನೇ ಪ್ರತಿವಾದಿಗಳ ಸಹಿಯನ್ನು ನೀವು ಸೃಷ್ಟಿ

ಮಾಡಿರುವ ಕಾರಣದಿಂದ ಈ ದಾವೆಯಲ್ಲಿ ನೀವು 4 ರಿಂದ 7ನೇ ಪ್ರತಿವಾದಿಗಳಿಗೆ ಸಮನ್ಸ್ ನ್ನು ಜಾರಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. 4 ರಿಂದ 7ನೇ ಪ್ರತಿವಾದಿಗಳು ನ್ಯಾಯಾಲಯಕ್ಕೆ ಬಂದರೆ ವಕಾಲತ್ತಿನಲ್ಲಿರುವ ಅವರ ಸಹಿಗೂ ಮತ್ತು ನಿಪಿ-1 ರಲ್ಲಿರುವ ಸಹಿಗಳಿಗೂ ವ್ಯತ್ಯಾಸ ಕಂಡು ಬರುತ್ತದೆಂಬ ಉದ್ದೇಶಕ್ಕೆ ನೀವು ಅವರಿಗೆ ಸಮನ್ಸನ್ನು ಸರಿಯಾಗಿ ತೆಗೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ.

7. ನಿಪಿ-1 ರ ಹಾಳೆಗಳನ್ನು ನಾನೇ ತಂದಿರುತ್ತೇನೆ. ನಿಪಿ-1 ನ್ನು ರಾಜೇಶ್ ಎನ್ನುವವರು ಬೆರಳಚ್ಚು ಮಾಡಿರುತ್ತಾರೆ. ನಿಪಿ-1 ನ್ನು ಬೆರಳಚ್ಚು ಮಾಡುವ ಸಮಯದಲ್ಲಿ ನಾನು ಹಾಜರಿದ್ದೇನು. ನಿಪಿ-1 ಕ್ಕೆ ರಾಜೇಶ್ ರವರು ಸಹಿಯನ್ನು ಮಾಡಿರುತ್ತಾರಾ ಎಂದರೆ ಸಾಕ್ಷಿ ನೋಟರಿಯನ್ನು ಮಾಡುವ ಸಮಯದಲ್ಲಿ ಅವರ ಸಹಿಯನ್ನು ಮಾಡಿದ್ದಾರೆ ಎನ್ನುತ್ತಾರೆ. ರಾಜೇಶ್ ರವರು ನೊಂದಾಯಿತ ಪತ್ರ ಬರಹಗಾರರು ಆಗಿರುವುದಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ನಿಪಿ-1 ಕ್ಕೆ ರಾಜೇಶ್ ರವರು ಅವರ ಪರವಾನಗಿ ನಂಬರ್ ಹಾಕಿದ್ದಾರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನಾನು ನಿಪಿ-1 ರ ಹಾಳೆಗಳನ್ನು ತಂದ 2-3 ದಿನದ ನಂತರ ಅದನ್ನು ಬೆರಳಚ್ಚು ಮಾಡಲಾಗಿರುತ್ತದೆ.

8. ನಿಪಿ-1 ರ ಹಾಳೆಗಳನ್ನು ತರುವ ಮೊದಲೇ ವ್ಯವಹಾರದ ಬಗ್ಗೆ ಮಾತುಕತೆ ಆಗಿರುತ್ತದೆ. ಸದರಿ ಮಾತುಕತೆಯ ಸಮಯದಲ್ಲಿ 1ನೇ ಪ್ರತಿವಾದಿಯ ಸ್ನೇಹಿತರಾದ ಹೆಚ್ ಗಂಗಪ್ಪ ಮತ್ತು ನರಸಿಂಹಮೂರ್ತಿ ರವರು ಇದ್ದರು. ಸದರಿ ಮಾತುಕತೆಯ ಸಮಯದಲ್ಲಿ ದಾವ ಸ್ವತ್ತಿಗೆ ಸಂಬಂಧಿಸಿದಂತೆ ವ್ಯವಹಾರವು ನಡೆದಿರುತ್ತದೆ. ಸದರಿ ಮಾತುಕತೆಯ ಸಮಯದಲ್ಲಿ ಯಾವುದೇ ಮುಂಗಡ ಹಣವನ್ನು ನಾನು ನೀಡಿರುವುದಿಲ್ಲ. 1ನೇ ಪ್ರತಿವಾದಿಯು ದಾವ ಸ್ವತ್ತನ್ನು ರೂ.75000/- ಕ್ಕೆ ಹೇಳಿದ್ದರು, ಮಾತುಕತೆ

ಆದ ನಂತರ ರೂ.55000/- ಕ್ಕೆ ಅದನ್ನು ತೀರ್ಮಾನ ಮಾಡಲಾಗಿತ್ತು ಮತ್ತು ನಾನು ರೂ.45000/- ಹಣವನ್ನು ನೀಡಿದಾಗ ಪ್ರತಿವಾದಿಗಳು ಎಲ್ಲರೂ ನಿಪಿ-1ಕ್ಕೆ ಅವರ ಸಹಿಯನ್ನು ಮಾಡಿದ್ದರು. ಮಾತುಕತೆ ಆದ ಸಮಯದಲ್ಲಿ ನನ್ನ ಬಳಿ ರೂ.55000/- ಹಣವಿತ್ತು. ನಿಮ್ಮ ಬಳಿ ಹಣವಿದ್ದ ಕಾರಣ ಮಾತುಕತೆ ಆದ ಸಮಯದಲ್ಲಿಯೇ ನಿಪಿ-1 ನ್ನು ನೊಂದಣಿ ಮಾಡಿಸಬಹುದಿತ್ತು ಎಂದರೆ ಸಾಕ್ಷಿ 1ನೇ ಪ್ರತಿವಾದಿಯು ದಾವ ಸ್ವತ್ತಿಗೆ ಸಂಬಂಧಿಸಿದಂತೆ ಎ-ಖಾತೆ ಇರುವುದಿಲ್ಲ ಎಂದು ಹೇಳಿದರು ಮತ್ತು ಅದನ್ನು ಮಾಡಿಸಿದ ನಂತರ ನೊಂದಣಿ ಮಾಡಿಕೊಡುತ್ತೇನೆಂದು ತಿಳಿಸಿದರು ಎನ್ನುತ್ತಾರೆ. ದಾವ ಸ್ವತ್ತಿಗೆ ಸಂಬಂಧಿಸಿದ ಖಾತೆಯು 1ನೇ ಪ್ರತಿವಾದಿಯ ಹೆಸರಿನಲ್ಲಿಯೇ ಇತ್ತು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. 1ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆಯು ಇದ್ದ ಕಾರಣ ನಿಪಿ-1 ನ್ನು ನೊಂದಣಿ ಮಾಡಿಸಬಹುದಿತ್ತು ಎಂದರೆ ಸಾಕ್ಷಿ ನೊಂದಣಿ ಮಾಡಬಹುದಿತ್ತು, ಆದರೆ 1ನೇ ಪ್ರತಿವಾದಿಯು ಕಾಲಾವಕಾಶವನ್ನು ಕೋರಿದ್ದರಿಂದ ನೊಂದಣಿ ಮಾಡಿಸಲಿಲ್ಲ ಎನ್ನುತ್ತಾರೆ. ನೀವು ಹೇಳುವ ಹಾಗೆ 1ನೇ ಪ್ರತಿವಾದಿಗೆ ಹಣದ ಅವಶ್ಯಕತೆ ಇದ್ದಿದ್ದೆ ಆದ ಪಕ್ಷದಲ್ಲಿ ಅವರು ಪೂರ ಹಣವನ್ನು ನಿಮ್ಮಿಂದ ಪಡೆದುಕೊಂಡು ನೊಂದಣಿ ಮಾಡಿಸಬಹುದಿತ್ತು, ಆದರೆ ನಿಪಿ-1 ನ್ನು ಸೃಷ್ಟಿ ಮಾಡಿರುವ ಕಾರಣದಿಂದ ಅದನ್ನು ನೊಂದಣಿ ಮಾಡಿಸಲಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ನಿಪಿ-1 ನ್ನು ಮಾಡಿದ ದಿನದಲ್ಲಿ 3 ರಿಂದ 7ನೇ ಪ್ರತಿವಾದಿಗಳು ಹಾಜರಿರಲಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**

**ದಿನಾಂಕ: 24-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- ವಾದಿಯ ಪರ ಶ್ರೀ. ಸಿ.ಕೆ.ಆರ್. ವಕೀಲರಿಂದ:-**

12. ಈಗ ಸಾಕ್ಷಿಗೆ ನಿಡಿ-2 ರಿಂದ 4 ನ್ನು ತೋರಿಸಿದ್ದು, ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಯಾರು ಹಾಜರು ಪಡಿಸಿರುತ್ತಾರೆಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ನಿಡಿ-2 ರಿಂದ 4 ರ ದಾಖಲೆಗಳು ಸರ್ವೆ ನಂಬರ್-16/1ಎ ಗೆ ಸಂಬಂಧಿಸಿರುತ್ತದೆ. ನಿಡಿ-2 ರಿಂದ 4 ಮನೆಯ ಕಂದಾಯಕ್ಕೆ ಸಂಬಂಧಿಸಿದ ರಸೀದಿಗಳು ಆಗಿದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಈಗ ಸಾಕ್ಷಿಗೆ ನಿಡಿ-29 ರಿಂದ ನಿಡಿ-32 ನ್ನು ತೋರಿಸಿದ್ದು, ಅದು ಸರ್ವೆ ನಂಬರ್-16/1ಡಿ ಗೆ ಸಂಬಂಧಿಸಿದ ಪಹಣಿಗಳು ಆಗಿದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸರ್ವೆ ನಂಬರ್-16/1ಡಿ ದಾವ ಸ್ವತ್ತು ಆಗಿರುವುದಿಲ್ಲ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ.

13. ನಾನು ದಾವ ಸ್ವತ್ತಿನಲ್ಲಿ ಈಗಾಗಲೇ ಮನೆಯನ್ನು ನಿರ್ಮಾಣ ಮಾಡಿರುತ್ತೇನೆ. ನಾನು ಮನೆಯನ್ನು ಪೂರ್ತಿಯಾಗಿ ನಿರ್ಮಾಣ ಮಾಡಿದ್ದೇನೆಂದು ತೋರಿಸಲು ನ್ಯಾಯಾಲಯಕ್ಕೆ ಪೋಟೋಗಳನ್ನು ಹಾಜರು ಪಡಿಸಿದ್ದೇನೆ. ನನ್ನ ಹೊಸ ಮನೆಗೆ ನಾನು ವಿದ್ಯುತ್ ಸಂಪರ್ಕವನ್ನು ಸಹ ಪಡೆದುಕೊಂಡಿರುತ್ತೇನೆ. ನಾನು ಮನೆಯನ್ನು ಸಂಪೂರ್ಣವಾಗಿ ನಿರ್ಮಾಣ ಮಾಡಿ ಸುಮಾರು 2 ವರ್ಷಗಳು ಆಗಿದೆ. ನಾನು ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿದ್ದೇನೆಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಈಗ ಸಾಕ್ಷಿಗೆ ನಿಡಿ-11 ರಿಂದ 19 ನ್ನು ತೋರಿಸಿದ್ದು, ಸದರಿ ರಸೀದಿಗಳು ನಿಮ್ಮ ಮನೆಗೆ ಪಡೆದುಕೊಂಡಿರುವ ವಿದ್ಯುತ್ ಸಂಪರ್ಕಕ್ಕೆ ಸಂಬಂಧಿಸಿರುತ್ತದೆಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಡಿ-11 ರಿಂದ 19 2020 ರಿಂದ 2022 ಕ್ಕೆ ಸಂಬಂಧಿಸಿದ ರಸೀದಿಗಳು ಆಗಿದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನನ್ನ ಮನೆಗೆ ವಿದ್ಯುತ್ ಮೀಟರ್ ಹಾಕಿ ಸುಮಾರು 1 ರಿಂದ 2 ವರ್ಷಗಳು ಆಗಿದೆ. ನಿಡಿ-11 ರಿಂದ 19 ರ ದಾಖಲಾತಿಗಳು ದಾವ ಸ್ವತ್ತಿನಲ್ಲಿರುವ ಮನೆಗೆ ಸಂಬಂಧಿಸಿರುವ ರಸೀದಿಗಳು ಆಗಿರುವುದಿಲ್ಲ, ಬದಲಾಗಿ ದಾವ ಸ್ವತ್ತಿನ ಪೂರ್ವ ದಿಕ್ಕಿಗೆ ಇರುವ ಮನೆಗೆ ಸಂಬಂಧಿಸಿದ ರಸೀದಿಗಳು ಆಗಿದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ.

14. ತಹಶೀಲ್ದಾರ್ ಅಥವಾ ಗ್ರಾಮ ಲೆಕ್ಕಾಧಿಕಾರಿಗಳು ದಾವ ಸ್ವತ್ತಿಗೆ ಬಂದಿರುವುದಿಲ್ಲ. ಎ.ಡಿ.ಎಲ್.ಆರ್ ರವರು ದಾವ ಸ್ವತ್ತಿಗೆ ಬಂದು ದಾವ ಸ್ವತ್ತಿನ ಬಗ್ಗೆ ಪರಿಶೀಲನೆ ಮಾಡಿರುವುದಿಲ್ಲ. ನಾನು ದಾವ ಸ್ವತ್ತಿನ ಸ್ವಾಧೀನದಲ್ಲಿ ಇದ್ದೇನೆಂದು ತೋರಿಸಲು ಸಂಬಂಧಪಟ್ಟ ಅಧಿಕಾರಿಗಳಿಂದ ಪರಿಶೀಲನೆ ಮಾಡಿಸಿರುವುದಿಲ್ಲ. ನಾನು ದಾವ ಸ್ವತ್ತಿನ ಸ್ವಾಧೀನದಲ್ಲಿ ಇದ್ದೇನೆಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನೀವು ಎಂದಿಗೂ ಸಹ ದಾವ ಸ್ವತ್ತಿನ ಸ್ವಾಧೀನದಲ್ಲಿ ಇರುವುದಿಲ್ಲ ಮತ್ತು ವಾದಿಯೇ ಖುದ್ದಾಗಿ ದಾವ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದಾರೆಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ವಾದಿಗೆ ಸೇರಿರುವ ದಾವ ಸ್ವತ್ತನ್ನು ಕಬಳಿಸಬೇಕೆಂಬ ಉದ್ದೇಶದಿಂದ ನೀವು ಅಕ್ರಮವಾಗಿ ಮನೆಯನ್ನು ನಿರ್ಮಾಣ ಮಾಡಿದ್ದೀರಾ ಎಂದರೆ ಸಾಕ್ಷಿ

ಸರಿಯಲ್ಲ ಎನ್ನುತ್ತಾರೆ. ನಿಮಗೂ ಮತ್ತು 2ನೇ ಪ್ರತಿವಾದಿಗೂ ದಾವ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ಸುಳ್ಳು ಪ್ರತಿವಾದಪತ್ರ ಸಲ್ಲಿಸಿ, ಸುಳ್ಳು ಮುಖ್ಯ ವಿಚಾರಣೆ ಪ್ರಮಾಣಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ ಃ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**

**ಅ. ದಾ. ಸಂ.**
**ಡಿ. ಡಬ್ಲ್ಯೂ - 01**

**ದಿನಾಂಕ: 23-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ-ವಾದಿಯ ಪರ ಶ್ರೀ.ವಿ. ಎಲ್. ಎನ್ , ವಕೀಲರಿಂದ:-**

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**